ಸಂಜಯ್ ಶೆಟ್ಟರಲ್ಲಿ ಕಾಟೇಜ್ ಮಾಡಲು ಬೇಕಾದ ವಸ್ತುಗಳನ್ನು ಖರೀದಿಸಲು ಹೇಳಿದ. ಅವರು ಮಂಗಳೂರಿನ ಹಲವಾರು ಅಂಗಡಿಗಳಿಗೆ ಹೋಗಿ ಕಾಟೇಜ್‌ಗೆ ಬೇಕಾದ ವಸ್ತುಗಳನ್ನು ಖರೀದಿಸಿದರು. ಇವನ್ನೆಲ್ಲ ಮಂಗಳೂರಿಂದ ಟ್ರಕ್‌ನಲ್ಲಿ ಶೆಣೈಮಾಮನ ಅಂಗಡಿಯವರೆಗೆ ಮರುದಿನ ಸಾಗಿಸುವುದಾಗಿ ತೀರ್ಮಾನಿಸಲಾಯಿತು.

ಹಾಗೆ ಮಂಗಳೂರಿಂದ ಹಿಂದೆ ಬಂದವರು ನೇರ ಶೆಣೈ ಮಾಮನ ಅಂಗಡಿಗೆ ಹೋದರು. ಶೆಟ್ಟರನ್ನು ನೋಡಿ ಶೆಣೈ ಮಾಮ 'ನಮಸ್ಕಾರ ಶೆಟ್ರೇ, ಬಹಳ ಸಮಯದ ನಂತರ ಬಂದಿದ್ದೀರಿ...' ಎಂದರು.

'ಬರಬೇಕಾಗಿ ಆಯ್ತು ಶೆಣೈಯವರೇ' ಎನ್ನುತ್ತಾ ಶೆಟ್ಟರು ಸಂಜಯನನ್ನು ಪರಿಚಯಿಸಿ ಅವನು ಮಾಡಬಯಸುವ ಪರಿವರ್ತನೆಯನ್ನು ಸೂಕ್ಷ್ಮವಾಗಿ ಹೇಳಿದರು.

ಶೆಣೈ ಮಾಮ ಬಹಳ ಖುಷಿಪಟ್ಟರು. ಸೀತಾಪುರ ಉದ್ಧಾರವಾದರೆ ತನ್ನ ಅಂಗಡಿಗೂ ಜಾಸ್ತಿ ಜನ ಬರ್ತಾರೆ ಎಂದುಕೊಂಡ ಅವರು ಸಂಜಯ್ ಕಡೆ ತಿರುಗಿ, 'ನೋಡಿ ಕಾರಂತರೇ, ನೀವು ನಿಮ್ಮ ಪರಿಚಯ ನನಗೆ ಕಳೆದ ಸಲ ಹೇಳಲೇ ಇಲ್ಲ. ನಿಮ್ಮನ್ನು ನೋಡಿದಾಗಲೇ ನನಗೆ ನೀವು ದೊಡ್ಡ ಜನ ಅಂತ ಕಂಡಿತ್ತು. ಬಹಳ ಸಂತೋಷ' ಅಂದರು.

ಎಲ್ಲರೂ ಸೀತಾಪುರಕ್ಕೆ ಹಿಂದಿರುಗಲು ಮುಂದಾದರು.

ದಾರಿಯಲ್ಲಿ ಸಂಜಯನಿಗೆ ಒಂದು ದೊಡ್ಡ ಸಮಸ್ಯೆ ಕಂಡುಬಂತು.

'ಶೆಟ್ರೇ, ನಾಳೆ ಟವರ್‌ಗೆ ಬೇಕಾದ ದೊಡ್ಡ ಕಬ್ಬಿಣದ ಕಂಬಗಳು ಬರುತ್ತವೆ. ನಿಮ್ಮ ಹಾಗೂ ಆನಂದಣ್ಣನ ಕಾಟೇಜ್‌ಗೆ ಬೇಕಾದ ವಸ್ತುಗಳೂ ಬರುತ್ತವೆ. ಇವನ್ನು ಸೀತಾಪುರಕ್ಕೆ ಹೇಗೆ

